Q-72 (26)

**ಮಾನ್ಯ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಯು.ಬಿ. ವೆಂಕಟೇಶ್ ಮತ್ತು ಶ್ರೀ ಕೆ.ಸಿ ಕೊಂಡಯ್ಯರವರಿಂದ ನಿಯಮ - 72 ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ :** ಬೆಂಗಳೂರು ಹೃದಯಭಾಗದಲ್ಲಿರುವ ಕಬ್ಬನ್ ಉದ್ಯಾನ ಪ್ರದೇಶವನ್ನು ತೋಟಗಾರಿಕೆ ಇಲಾಖೆಯು ನಿರ್ವಹಣೆ ಮಾಡುತ್ತಾ ಬಂದಿದ್ದು, ಸದರಿ ಪ್ರದೇಶದಲ್ಲಿ ಸಾವಿರಾರು ಪಕ್ಷಿ ಸಂಕುಲಗಳು, ಜೀವಿ ವೈವಿಧ್ಯಗಳು ನೆಲೆಸಿರುತ್ತವೆ. ಆದರೆ ಕಬ್ಬನ್ ಉದ್ಯಾನದಲ್ಲಿ ವಾಹನಗಳ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಟ್ಟಿರುವುದರಿಂದ ಈ ಸಂಕುಲಗಳಿಗೆ, ಹೆಚ್ಚಿನದಾಗಿ ಪರಿಸರಕ್ಕೆ ಹಾನಿಯುಂಟಾಗುತ್ತಿದ್ದು, ಸರ್ಕಾರ ಕೂಡಲೇ ಕಬ್ಬನ್ ಉದ್ಯಾನವದಲ್ಲಿನ ವಾಹನಗಳ ಮುಕ್ತ ಸಂಚಾರವನ್ನು ನಿಷೇಧಿಸುವ ಕುರಿತು.

*****

**ಉತ್ತರ :** ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನವು ಕರ್ನಾಟಕ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ 1975 (Karnataka Government Parks (Preservation) Act - 1975) ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಅದರನ್ವಯ ಅಧಿನಿಯಮದ ಮೂಲ ಉದ್ದೇಶವು ಈ ರೀತಿ ಇರುತ್ತದೆ. "It shall be the duty of the State Government to preserve and maintain as Horticulture gardens the parks to which this Act is applicable and take such actions may be necessary to improve the utility of such parks as such gardens" ಹಾಗಾಗಿ ಕಬ್ಬನ್ ಉದ್ಯಾನವನವನ್ನು ಸಂರಕ್ಷಿಸುವುದು ತೋಟಗಾರಿಕೆ ಇಲಾಖೆಯ ಆಧ್ಯ ಮತ್ತು ಮೂಲ ಕರ್ತವ್ಯವಾಗಿರುತ್ತದೆ.

ಉದ್ಯಾನವನದ ಒಳರಸ್ತೆಗಳಲ್ಲಿ ಪ್ರತಿ ಭಾನುವಾರ ಹಾಗೂ ಪ್ರತಿ ಮಾಹೆಯ 2 ಮತ್ತು 4 ನೇ ಶನಿವಾರಗಳಂದು, ರಾಷ್ಟ್ರೀಯ ಹಬ್ಬಗಳಾದ ಗಣರಾಜ್ಯೋತ್ಸವ - ಜನವರಿ 26, ಸ್ವಾತಂತ್ರ್ಯ ದಿನಾಚರಣೆ - ಆಗಸ್ಟ್ 15 ಮತ್ತು ಗಾಂಧೀ ಜಯಂತಿ - ಅಕ್ಟೋಬರ್ 2 ರಂದು ಹಾಗೂ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಅನ್ವಯವಾಗುವ ಸಾಮಾನ್ಯ ಸಾರ್ವತ್ರಿಕ ರಜಾ ದಿನಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ಪೊಲೀಸ್ ಕಮಿಷನರ್, ಬೆಂಗಳೂರು ನಗರ ರವರ ಅಧಿಸೂಚನೆ ಸಂಖ್ಯೆ: ಅಸೂ/01/jt/ಪಿ.ಪಿ (ಸಂ)/ 2020 ದಿನಾಂಕ:10-01-2020 ರಂತೆ ಕಬ್ಬನ್ ಉದ್ಯಾನವನದ ಆವರಣದಲ್ಲಿ ವಾಯುಮಾಲಿನ್ಯ ಮತ್ತು ಶಬ್ದಮಾಲಿನ್ಯವನ್ನು ನಿಯಂತ್ರಿಸುವ ಹಾಗೂ ಉದ್ಯಾನವನಕ್ಕೆ ಭೇಟಿ ನೀಡುವ ಸಾರ್ವಜನಿಕರು, ನಡಿಗೆದಾರರು, ಮಕ್ಕಳು, ವಯೋವೃದ್ಧರು ಮತ್ತು ಪ್ರವಾಸಿಗರ ಹಿತದೃಷ್ಟಿಯಿಂದ ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ.

ಸಂಖ್ಯೆ: HORTI/357/HGM/2020-admn-Horti-Sec

(ನಾರಾಯಣ ಗೌಡ)
ತೋಟಗಾರಿಕೆ, ಪೌರಾಡಳಿತ
ಮತ್ತು ರೇಷ್ಮೆ ಸಚಿವರು